# ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮಾನ್ಯ ಶಾಸಕರಾದ ಶ್ರೀ **ಹೆಚ್.ಆರ್. ಗವಿಯಪ್ಪ ಅವರು** ವಿಶ್ವವಿದ್ಯಾಲಯಕ್ಕೆ ಭೇಟಿ– **5.6.2023**

## ಕನ್ನಡ ವಿಶ್ವವಿದ್ಯಾಲಯಕ್ಕೆ ಎಲ್ಲ ರೀತಿಯ ಸಹಕಾರ – ಶ್ರೀ ಹೆಚ್.ಆರ್. ಗವಿಯಪ್ಪ

**ಮಾನ್ಯ ಶಾಸಕರು, ವಿಜಯನಗರ ಕ್ಷೇತ್ರ**

ಇತ್ತೀಚೆಗೆ ಭೇಟಿಯಾದ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಮಾನ್ಯ ಶಾಸಕರಾದ **ಶ್ರೀ ಹೆಚ್.ಆರ್. ಗವಿಯಪ್ಪ ಅವರು** ವಿಶ್ವವಿದ್ಯಾಲಯದ ಬೆಳವಣಿಗೆಗೆ ಎಲ್ಲ ರೀತಿಯ ಸಹಕಾರವನ್ನು ನೀಡುವುದಾಗಿ ತಿಳಿಸಿದರು. ಭಾನುವಾರ ವಿಶ್ವವಿದ್ಯಾಲಯದ ಕುಲಪತಿಗಳಾದ **ಪ್ರೊ. ಡಿ.ವಿ. ಪರಮಶಿವಮೂರ್ತಿ ಇವರು** ಶಾಸಕರನ್ನು ಭೇಟಿ ಮಾಡಿದಾಗ ಮಾನ್ಯ ಶಾಸಕರು ವಿಶ್ವವಿದ್ಯಾಲಯದ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಈ ಸಂದರ್ಭದಲ್ಲಿ ಕನ್ನಡದ ಬಗ್ಗೆ ಒಲವುಳ್ಳ ಮುಖ್ಯಮಂತ್ರಿಗಳ ಸಹಕಾರದಿಂದ ದೇಶದಲ್ಲೇ ಅಪರೂಪದ ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆಗೆ ಸಂಪೂರ್ಣವಾಗಿ ಸಹಕಾರ ನೀಡಲಾಗುವುದೆಂದು ಭರವಸೆ ನೀಡಿದರು. ತಮ್ಮ ಮತ್ತು ವಿಶ್ವವಿದ್ಯಾಲಯದ ಮಧ್ಯೆ ಇರುವ ಉತ್ತಮ ಸಂಬಂಧವನ್ನು ನೆನಪಿಸಿಕೊಂಡರು. ಈ ವೇಳೆ ಉಪಕುಲಸಚಿವ **ಡಾ. ಎ. ವೆಂಕಟೇಶ** ಮತ್ತು ಇತರರು ಹಾಜರಿದ್ದರು.



ಶಾಸಕರಾದ ಶ್ರೀ ಹೆಚ್.ಆರ್. ಗವಿಯಪ್ಪರೊಂದಿಗೆ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ.ಡಿ.ವಿ. ಪರಮಶಿವಮೂರ್ತಿ ಅವರು ಮತ್ತು ಉಪಕುಲಸಚಿವ ಡಾ.ಎ. ವೆಂಕಟೇಶ ಅವರು ಉಪಸ್ಥಿತರಿದ್ದರು.



### 'ವಿವಿ ಅಭಿವೃದ್ಧಿಗೆ ಸಹಕರಿಸುವೆ'

**ಹೊಸಪೇಟೆಯಲ್ಲಿ ಶಾಸಕ ಎಚ್. ಆರ್.ಗವಿಯಪ್ಪ ಅವರ ಮನೆಗೆ ಕುಲಪತಿ ಡಿ.ವಿ. ಪರಮಶಿವಮೂರ್ತಿ ಭೇಟಿ ನೀಡಿ ಗೌರವಿಸಿದರು.**

**ವಿಜಯನಗರ (ಹೊಸಪೇಟೆ):** ಕನ್ನಡ ವಿವಿಗೆ ಬೇಕಿರುವ ಎಲ್ಲಾ ರೀತಿಯ ಸಹಕಾರ ನೀಡುತ್ತೇನೆ ಎಂದು ನೂತನ ಶಾಸಕ ಎಚ್.ಆರ್.ಗವಿಯಪ್ಪ ಭರವಸೆ ನೀಡಿದ್ದಾರೆ ಎಂದು ಕುಲಪತಿ ಡಿ.ವಿ. ಪರಮಶಿವಮೂರ್ತಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಶಾಸಕರ ನಿವಾಸಕ್ಕೆ ಇತ್ತೀಚೆಗೆ ಭೇಟಿ ಕನ್ನಡ ವಿವಿ ಜತೆ ಚರ್ಚೆ ನಡೆಸಿದ್ದೇವೆ. ವಿವಿಯ ಅನೇಕ ವಿಷಯಗಳ ಬಗ್ಗೆ ಚರ್ಚೆ ನಡೆಸಿದರು. ಈ ಸಂದರ್ಭ ಕನ್ನಡದ ಬಗ್ಗೆ ಒಲವುಳ್ಳ ಮುಖ್ಯಮಂತ್ರಿಗಳ ಸಹಕಾರದಿಂದ ದೇಶದಲ್ಲೇ ಅಪರೂಪದ ಕನ್ನಡ ವಿವಿಯ ಬೆಳವಣಿಗೆಗೆ ಸಂಪೂರ್ಣವಾಗಿ ಸಹಕಾರ ನೀಡಲಾಗುವುದು. ತಮ್ಮ ಮತ್ತು ವಿಶ್ವವಿದ್ಯಾಲಯದ ಮಧ್ಯೆ ಇರುವ ಉತ್ತಮ ಸಂಬಂಧವನ್ನು ನೆನಪಿಸಿಕೊಂಡರು ಎಂದರು.

ಉಪಕುಲಸಚಿವ ಡಾ.ಎ.ವೆಂಕಟೇಶ ಸೇರಿ ಇತರರಿದ್ದರು.

ದಾವಣಗೆರೆ ಉದಯವಾಣಿ
ಮಂಗಳವಾರ, ಜೂನ್ 6, 2023

## ಕುಲಪತಿಗಳಿಂದ ಗವಿಯಪ್ಪಗೆ ಸನ್ಮಾನ

**ಹೊಸಪೇಟೆ:** ಶಾಸಕ ಎಚ್.ಆರ್.ಗವಿಯಪ್ಪ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ.ಪರಮಶಿವಮೂರ್ತಿ ಅವರು ಗೌರವಿಸಿದರು.ಶಾಸಕರ ನಿವಾಸಕ್ಕೆ ತೆರಳಿದ ಅವರು, ಕನ್ನಡ ವಿವಿಯ ಅಭಿವೃದ್ಧಿ ಬೆಳವಣಿಗೆಗೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಗವಿಯಪ್ಪನವರು, ಕನ್ನಡದ ನಾಡು,ನುಡಿ ಬಗ್ಗೆ ಹೆಚ್ಚು ಕಾಳಜಿ,ಕಳಕಳಿ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಹಕಾರದಿಂದ ದೇಶದಲ್ಲೇ ಅಪರೂಪದ ವಿಶ್ವವಿದ್ಯಾಲಯ ಎನಿಸಿರುವ ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಉಪಕುಲಸಚಿವ ಡಾ। ಎ. ವೆಂಕಟೇಶ ಮತ್ತು ಇತರರು ಹಾಜರಿದ್ದರು.



**ಹೊಸಪೇಟೆ:** ಕನ್ನಡ ವಿವಿ ಕುಲಪತಿ ಡಾ।ಡಿ.ವಿ.ಪರಮಶಿವಮೂರ್ತಿ ಅವರು ಶಾಸಕ ಎಚ್.ಆರ್.ಗವಿಯಪ್ಪ ಅವರನ್ನು ಸನ್ಮಾನಿಸಿದರು.

ಕನ್ನಡಪ್ರಭ
ಬುಧವಾರ 7.6.2023

## ಹಂಪಿ ಕನ್ನಡ ವಿವಿ ಕುಲಪತಿಯಿಂದ ಶಾಸಕ ಗವಿಯಪ್ಪಗೆ ಸನ್ಮಾನ



ಹೊಸಪೇಟೆಯಲ್ಲಿ ಶಾಸಕ ಎಚ್.ಆರ್. ಗವಿಯಪ್ಪ ಅವರನ್ನು ಕನ್ನಡ ವಿವಿ ಕುಲಪತಿ ಡಿ.ವಿ. ಪರಮಶಿವಮೂರ್ತಿ ಸನ್ಮಾನಿಸಿದರು.

**ಹೊಸಪೇಟೆ:** ಶಾಸಕ ಎಚ್.ಆರ್. ಗವಿಯಪ್ಪ ಅವರನ್ನು ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಿ.ವಿ. ಪರಮಶಿವಮೂರ್ತಿ ಅವರು ಗೌರವಿಸಿದರು.ಶಾಸಕರ ನಿವಾಸಕ್ಕೆ ತೆರಳಿದ ಅವರು, ಕನ್ನಡ ವಿವಿಯ ಅಭಿವೃದ್ಧಿ, ಬೆಳವಣಿಗೆಗೆ ಕುರಿತು ಚರ್ಚಿಸಿದರು. ಈ ಸಂದರ್ಭದಲ್ಲಿ ಶಾಸಕ ಗವಿಯಪ್ಪ ಮಾತನಾಡಿ, ಕನ್ನಡ ನಾಡು, ನುಡಿ ಬಗ್ಗೆ ಹೆಚ್ಚು ಕಾಳಜಿ, ಕಳಕಳಿ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಹಕಾರದಿಂದ ದೇಶದಲ್ಲೇ ಅಪರೂಪದ ವಿಶ್ವವಿದ್ಯಾಲಯ ಎನ್ನಿಸಿರುವ ಕನ್ನಡ ವಿಶ್ವವಿದ್ಯಾಲಯದ ಬೆಳವಣಿಗೆಗೆ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ಉಪಕುಲಸಚಿವ ಡಾ. ಎ. ವೆಂಕಟೇಶ ಮತ್ತು ಇತರರು ಇದ್ದರು.